ನನಗೆ ಆಶ್ಚರ್ಯ, ಸಂತೋಷ ಎರಡೂ ಆದುವು. ಆಶ್ಚರ್ಯವಾದದ್ದು, ಈ ಸಂಗತಿ ಈ ಮೊದಲು ನನ್ನ ಲಕ್ಷ್ಯಕ್ಕೆ ಬಂದಿರಲಿಲ್ಲ ಎನ್ನುವ ಕಾರಣಕ್ಕೆ. ಸಂತೋಷವಾದದ್ದು, 'ವಾತ್ಸಲ್ಯ ಪಥ' ಕೇವಲ ಒಂದು ಕಾದಂಬರಿಯ ಹೆಸರು ಆಗಿರದೇ ಬಲ್ಲಾಳರು ತಮ್ಮ ಸಾಹಿತ್ಯದಲ್ಲಿ ಹೇಗೋ ಹಾಗೆಯೇ ನಿಜ ಜೀವನದಲ್ಲೂ ಶ್ರಮಿಸಿದ ಹಾದಿಯ ಹೆಸರೂ ಆಗಿದೆಯೆಂದು ಹೊಳೆದಾಗ.

ನಾನು ಇದನ್ನು ಇಲ್ಲಿ ನೆನೆಯುತ್ತಿದ್ದದ್ದು ಈ ವಾತ್ಸಲ್ಯ ಮೂರ್ತಿಗೆ ನನ್ನ ನಮನಗಳನ್ನು ಸಲ್ಲಿಸಲು – ಇವರ ಮಮತೆಯ ಸವಿಯುಂಡ ಒಬ್ಬ ತಮ್ಮನಾಗಿ ಹೀಗೆ ನಮಿಸಿ ಆದ ಮೇಲೆ ಇವರನ್ನು ಕುರಿತು ಸಣ್ಣದೊಂದು ತಕರಾರು ನೋಂದಾಯಿಸುವ ಧೈರ್ಯ ಮಾಡುತ್ತಿದ್ದೇನೆ. ನೀವೆಲ್ಲ ಇದನ್ನು ಓದುತ್ತೀರಿ ಎನ್ನುವ ಕಾರಣಕ್ಕೇ ಈ ಧೈರ್ಯ ಕುದುರಿರಬಹುದು. ನನ್ನ ದೂರು ಇದ್ದದ್ದು ಈ ಅಣ್ಣ ನನ್ನ ಮೇಲೆ ಚಲಾಯಿಸುತ್ತ ಬಂದ 'ದಾದಾಗಿರಿ'ಯ ಬಗ್ಗೆ. ದೂರನ್ನು ಕೇಳಿದ ಮೇಲೆ ನಾನು ಇದನ್ನು ಬರೆಯುತ್ತಿದ್ದದ್ದೇ ಅದನ್ನು ನಮೂದಿಸಲು ಎನ್ನುವ ಭಾವನೆ ನಿಮಗಾದರೆ ನನಗೆ ಸಂತೋಷವೇ! ಯಾಕೆಂದರೆ ನನ್ನ ತಕರಾರಿನ ಸ್ವರೂಪವೇ ಅಂಥದ್ದಾಗಿದೆ!

ನನ್ನ ಸಾಹಿತ್ಯದ ಬಗ್ಗೆ ಬಂದ ವಿಮರ್ಶೆಗೆ ನಾನು ತುಂಬಾ Sensitive ಆಗಿದ್ದೇನೆಂದೂ, ಇಂಥದ್ದನ್ನು ಮನಸ್ಸಿಗೆ ಹಚ್ಚಿಕೊಂಡು ನನ್ನಷ್ಟು ಕೊರಗುವವರು ಈ ಭೂಮಂಡಲದಲ್ಲೇ ಇನ್ನೊಬ್ಬರು ಇರುವುದು ಶಕ್ಯವೇ ಇಲ್ಲವೆಂದೂ ನನ್ನ ಬಹಳಷ್ಟು, ಮಿತ್ರರು ತಪ್ಪು ಕಲ್ಪನೆ ಮಾಡಿಕೊಂಡಿದ್ದಾರೆ. ನಾನು Sensitive ಆಗಿದ್ದದ್ದು ನಿಜ. ಆದರೆ ಇವರೆಲ್ಲ ತಪ್ಪು ತಿಳಿದುಕೊಂಡ ಹಾಗೆ ವಿಮರ್ಶೆಗೆ ಮಾತ್ರವಲ್ಲ, ಎಲ್ಲದಕ್ಕೂ. ಹಾಗೆಂದೇ ಲೇಖಕನಾದೆನಲ್ಲವೆ? ಹೀಗೆ ಕೇಳಿದರೆ ಇವರು ಒಪ್ಪಬೇಕಲ್ಲ! ಒಪ್ಪಲಿಲ್ಲ. ಬಲ್ಲಾಳರಾದರೂ ಇವರೆಲ್ಲರಿಂದ ಭಿನ್ನರಾದಾರು ಎಂದು ತಿಳಿದಿದ್ದೆ. ಭಿನ್ನರಾದರು. ಆದರೆ ನಾನು ತಿಳಕೊಂಡ ರೀತಿಯಲ್ಲಿಲ್ಲ. ಯಾಕೆಂದರೆ, ನನ್ನ ಇತರ ಗೆಳೆಯರಾರೂ ಮಾಡಿರದ್ದನ್ನು, ಅಷ್ಟೇಕೆ ಒಡಹುಟ್ಟಿದ ಅಣ್ಣ ಕೂಡ ಮಾಡಿರದ್ದನ್ನು ಇವರು ಮಾಡಿದರು: ವಿಮರ್ಶೆಯ ಬಗೆಗಿನ ನನ್ನ ಕೊರಗನ್ನು ಕೇಳಿಸಿಕೊಂಡಿದ್ದೇ ಚೆನ್ನಾಗಿ ಗದರಿಸಿಬಿಟ್ಟರು. ಒಮ್ಮೆಯಲ್ಲ – ಹಲವು ಬಾರಿ. ಹಾಗೆ ಹೀಗೆ ಅಲ್ಲ ಮತ್ತೆ – 'ಚಿತ್ತಾಲ್' ಎಂದು ಸರಿಯಾಗಿ ದನಿಯೇರಿಸಿ ಮೃದು ಮನಸ್ಸಿನ, ಮೆಲುದನಿಯ ಇವರ ಬಾಯಿಯಿಂದ ಇಂಥ ಗದರಿಕೆ ಹೊರಡುವುದು ಸಾಧ್ಯವೆಂದು ತೋರಿರಲೇ ಇಲ್ಲ;

"ಚಿತ್ತಾಲ್! ಸಾಹಿತಿಯಾಗಿ ನಿಮ್ಮ ಕೆಲಸ ಬರೆಯೋದು. ನಿಮ್ಮ ಕೆಲಸವನ್ನು ನೀವು ಮತ್ತು ವಿಮರ್ಶಕರು ತಮ್ಮ ಕೆಲಸವನ್ನು ತಾವು ಮಾಡಲಿ, ಆದರೆ ಒಂದನ್ನು ನೆನಪಿಡಿ: ಸಾಹಿತ್ಯ ಕೃತಿಯೊಂದು ಹುಟ್ಟದ ಮೇಲೇ ವಿಮರ್ಶೆ ಹುಟ್ಟುತ್ತದೆ, ತದ್ವಿರುದ್ಧವಲ್ಲ. ವಿಮರ್ಶೆ ಇಲ್ಲದೆಯೂ ಸಾಹಿತ್ಯ ಸೃಷ್ಟಿಯಾಗಬಲ್ಲದು;



ತದ್ವಿರುದ್ಧವಲ್ಲ. ನಮ್ಮದಲ್ಲದ ಕೆಲಸದ ಬಗ್ಗೆ ನಾವೇಕೆ ತಲೆ ಕೆಡಿಸಿಕೊಳ್ಳಬೇಕು?"

ಗದರಿಸಿಕೊಂಡಾಗ ಕೆಡುಕೆನ್ನಿಸುತ್ತಿತ್ತು. ಆದರೆ ಆಮೇಲೆ, ಕಾಲಕ್ರಮದಲ್ಲಿ, ಈ ಗದರಿಕೆ ನನ್ನ ಮನಸ್ಸಿನ ಮೇಲೆ ಮಾಡುತ್ತಿದ್ದ ಆರೋಗ್ಯಕರ ಪರಿಣಾಮಕ್ಕೆ ನನಗೇ ಆಶ್ಚರ್ಯವಾಗುತ್ತಿತ್ತು, ಖುಷಿಯಾಗುತ್ತಿತ್ತು. ಬಲ್ಲಾಳರು ಬೆಂಗಳೂರಿಗೆ ಹೊರಟು ಹೋದಂದಿನಿಂದ ನಾನು 'ಮಿಸ್' ಮಾಡಿಕೊಳ್ಳುತ್ತಿದ್ದ ಮೊದಲ ಸಂಗತಿ ಈ ಗದರಿಕೆಯೇ. ಬರೆಯುವ ಹುಮ್ಮಸ್ಸು ಕುಗ್ಗಿದಾಗಲೆಲ್ಲ – 'ಬರೆಯುವ ಕೆಲಸವಷ್ಟೇ ನಿಮ್ಮದು' ಎಂದು ನೆನಪು ಮಾಡಿಕೊಟ್ಟು ಬರೆಯಲು ಹಚ್ಚುತ್ತಿದ್ದ ಆದರ, ಎಚ್ಚರಿಕೆಯ ದನಿ.

ಅಕ್ಕರೆ – ವ್ಯಾಸರಾಯ ಬಲ್ಲಾಳರ ಅಭಿನಂದನಾ ಕೃತಿಯ ಬರಹ ಮುಖ್ಯ ಭಾಗ